ಎಂದು ಕುವೆಂಪು ಅವರೇನೋ ಹಾಡಿದರು. ಆದರೂ ಮನೆ ಕಟ್ಟದೇ ಇರುವವರು ಯಾರು? ಕುವೆಂಪು ಅವರೂ ನಗರದಲ್ಲೊಂದು ಮನೆ ಕಟ್ಟಿದರೂ ಅವರ ಚೇತನ ಅನಿಕೇತನವಾಗಿದ್ದಿತು. ನಮ್ಮದೇನಿದ್ದರೂ ನಮ್ಮ ಮನೆಗಳಿಗೆ ಸೀಮಿತಗೊಂಡ ಚೇತನ.

ನಗರದೊಳಗೆ ಮನೆ ಮಾಡಿ ವಾಸಿಸುವುದೆಂದರೆ ಸಂತೆಯೊಳಗೊಂದು ಮನೆ ಮಾಡಿ ವಾಸಿಸಿದಂತೆಯೇ. ಸಂತೆ ಏನು, ಸದಾ ಜಾತ್ರೆಯಲ್ಲಿ ಇದ್ದಂತೆಯೇ. ನಗರಗಳಲ್ಲಿ ಎಲ್ಲಿ ನೋಡಿದಲ್ಲಿ ಜನ, ಗೌಜು ಗದ್ದಲ, ನಿತ್ಯಸಂತೆ. ಇನ್ನೂ ಆ ಗದ್ದಲದೊಂದಿಗೆ ರೈಲುಗಳ ಬರಹೋಗುವ ಸದ್ದು ಗದ್ದಲ ಕೂಡ ಸೇರಿದರೆ ಹೇಗಿರಬೇಡ. ಅಕ್ಕನ ಕಾಲದಲ್ಲಿ ರೈಲುಗಳು ಇದ್ದಿದ್ದರೆ ರೈಲು ಹಳಿಗಳ ಬದಿಗೆ ಮನೆಯ ಮಾಡಿ ಸದ್ದು ಗದ್ದಲಗಳಿಗೆ ಬೆಚ್ಚಿದಡೆ ಎಂತಯ್ಯ ಎಂದು ಅಕ್ಕ ತನ್ನ ವಚನದಲ್ಲಿ ಒಂದು ಸಾಲನ್ನು ಸೇರಿಸದೆ ಇರುತ್ತಿರಲಿಲ್ಲ. ಆ ಸಾಲನ್ನು ಈಗ ಸೇರಿಸುವ ಸಮಯ ಬಂದಿದೆ. ಈಗೇನು ಬಹಳ ಹಿಂದೆಯೇ ಬಂದಿದೆ.

ನಮ್ಮ ಮನೆಯ ಪಕ್ಕದ ರೈಲು ಮಾರ್ಗ ಸುಮಾರು ನೂರು ವರ್ಷಗಳಷ್ಟು ಹಿಂದೆಯೇ ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿವೆ. ತಮ್ಮ ವ್ಯಾಪಾರ ಆಡಳಿತದ ಅನುಕೂಲಕ್ಕಾಗಿ ದೇಶದ ಉದ್ದಗಲಕ್ಕೂ ರೈಲು ಹಳಿಗಳನ್ನು ಹಾಕಿ ಆಂಗ್ಲರು ನಮ್ಮ ದೇಶವನ್ನು ಲೂಟಿ ಮಾಡಲು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿಕೊಂಡರು. ಆಗ ಈ ರೈಲು ಮಾರ್ಗಗಳು ಮತ್ತು ನಿಲ್ದಾಣಗಳು ನಗರ ಪಟ್ಟಣಗಳಿಂದ ಸಾಕಷ್ಟು ಹೊರವಲಯದಲ್ಲಿಯೇ ಇದ್ದವು. ಆನಂತರ ನಮ್ಮ ನಗರ ಪಟ್ಟಣಗಳು ವಿಸ್ತರಿಸುತ್ತಾ ಹೋಗಿ ಈಗ ರೈಲು ಮಾರ್ಗ, ನಿಲ್ದಾಣಗಳು ನಗರದ ಹೃದಯ ಭಾಗವಾಗಿ ಹೋಗಿವೆ. ರೈಲು ಹಳಿಗಳು ಈಗ ನಮ್ಮ ಸಂಪರ್ಕ ಸಾಧನದ ಜೀವನಾಡಿಗಳೇ ಆಗಿವೆ. ನಾವು ವಾಸವಾಗಿರುವ ಬಡಾವಣೆ ರೈಲು ಹಳಿಗಳ ಹತ್ತಿರವಿದ್ದರೂ ಅಲ್ಲಿ ನೀವು ನಿವೇಶನ ತೆಗೆದುಕೊಂಡು ಮನೆ ಕಟ್ಟಿದ್ದೇಕೆ ಎಂದು ನೀವು ಕೇಳಬಹುದು, ಕೇಳಿ. ಆದರೆ ಒಂದು ನಿವೇಶನ ಕೊಂಡು ಮನೆ ಕಟ್ಟಿಸುವ ಸಾಹಸ, ನೀವು ಸಂಸಾರವೊಂದಿಗರಾಗಿ ಮನೆ ಕಟ್ಟಿಕೊಂಡವರಾಗಿದ್ದರೆ ನಿಮಗೆ ಈ ಕುರಿತು ಸಾಕಷ್ಟು ಅನುಭವ ಆಗಿರುತ್ತದೆ. ನಿವೇಶನ ಸಿಕ್ಕು ಮನೆ ಕಟ್ಟುವವರೆಗೆ ರೈಲ್ವೆ ಹಳಿಗಳ ಕಡೆಗೆ ಗಮನ ಎಲ್ಲಿರುತ್ತದೆ. ಮನೆ ಕಟ್ಟಿ ವಾಸಿಸತೊಡಗಿದ ಮೇಲೆಯೇ ಅಲ್ಲವೇ ಮನೆಯ ಸುತ್ತಲಿನ ಪೀಕಲಾಟ, ತಾಕಲಾಟಗಳು, ಸದ್ದು ಗದ್ದಲಗಳೆಲ್ಲ ಗಮನಕ್ಕೆ ಬರುವುದು. ನಮಗೂ ಹಾಗೆಯೇ ಆಯಿತು.

ಹಗಲು ಹೊತ್ತಿನಲ್ಲಿ ಓಡಾಡುವ ರೈಲುಗಳ ಕುರಿತು ನಮ್ಮ ಆಕ್ಷೇಪಣೆ ಅಷ್ಟಾಗಿ ಇಲ್ಲ. ನಗರದ ಎಲ್ಲ ಸದ್ದು ಗದ್ದಲಗಳಲ್ಲಿ ಅವು ಬರಹೋಗುವ ಸದ್ದು ಅಡಗಿ ಹೋಗಿ ಬಿಡುತ್ತದೆ... ಆದರೆ ಸಮಸ್ಯೆ ಆಗುವುದು ರಾತ್ರಿ ವೇಳೆ. ರೈಲುಗಳಿಗೆ ರಾತ್ರಿ ಏನು ಹಗಲೇನು, ಅವು ಮನುಷ್ಯ ಚಾಲಿತ ನಿಶಾಚರ, ಸಂಚಾರಿ ಯಂತ್ರಗಳು. ಅವು ಹಳಿಗಳ ಮೇಲೆ ಸದ್ದು ಮಾಡುತ್ತ ಹೋದರೆ ಸಾಕು, ಹಳಿ ಪಕ್ಕದ ಮನೆಗಳವರಿಗೆ ಅದರ ಕರ್ಕಶ ಸದ್ದು ಕೇಳದೇ ಇರದು. ಏನೇ ಸದ್ದಾದರೂ ಆ ಕಡೆ ಗಮನ ಕೊಡದವರು, ಸದ್ದಿನಿಂದ ವಿಚಲಿತಗೊಳ್ಳದೇ ನಿದ್ರೆ ಮಾಡುವವರು ನಮ್ಮ ಅಕ್ಕಪಕ್ಕ ಇದ್ದಾರೆ. ರೈಲಿನ ಸಪ್ಪಳದಿಂದ ನಿಮ್ಮ ನಿದ್ರೆಗೆ ಏನೂ ಭಂಗ ಬರುವುದಿಲ್ಲವೆ ಎಂದು ಕೆಲವರನ್ನು ಕೇಳಿದರೆ 'ಏ ನಮಗ ರೂಢಾ ಆಗೇದ ಬಿಡ್ರಿ' ಅಂತಾರೆ. ರೈಲುಗಳ ಸದ್ದು ಅವರಿಗೆ ಜೋಗುಳ ಇದ್ದಂತೆ. ದುಡಿದು ದಣಿದು ಬಂದು ಮಲಗಿದವರನ್ನು ಯಾವ ಸದ್ದೂ ಏನೂ ಮಾಡಲಾಗದು. ಆದರೆ ತೆಳು ನಿದ್ರೆಯ ನನ್ನಂಥವರು ಒಂದಿಷ್ಟು ಸದ್ದಾದರೂ ಎದ್ದು ಕೂತು ನಿದ್ರಾಭಂಗ ಆಯಿತೆಂದು ಗೊಣಗಾಡುತ್ತೇವೆ. ಆನಂತರ ಮಗ್ಗಲು ಬದಲಿಸುತ್ತಾ ರಾತ್ರಿ ಕಳೆಯುತ್ತೇವೆ. ಏಕೆಂದರೆ ಒಂದು ರೈಲಿನ ಸದ್ದು ಅಡಗಿದಂತೆ ಮತ್ತೊಂದು ರೈಲು ಶಿಳ್ಳೆ ಹಾಕುತ್ತ ಬರುತ್ತದೆ.

ರಾತ್ರಿ ಹೊತ್ತು ಜನವಸತಿ ಪ್ರದೇಶದಲ್ಲಿ ಶಿಳ್ಳೆ ಹಾಕಬಾರದು ಎಂಬ ನಿಯಮ ರೈಲುಗಳಿಗೆ ಇದ್ದಂತಿಲ್ಲ. ನೀರವ ರಾತ್ರಿಯಲ್ಲಿ ರೈಲಿನ ಶಿಳ್ಳೆ ಸದ್ದು ಬಹಳ ದೂರದವರೆಗೆ ಕೇಳಿಸುತ್ತದೆ. ಇನ್ನು ಮನೆಯ ಸಮೀಪದಲ್ಲಿ ಬಂದು ಶಿಳ್ಳೆ ಹಾಕುತ್ತ ಹೋದರೆ ಎಚ್ಚರವಾಗದೇ ಇರಲು ಸಾಧ್ಯವೇ?. ಒಂದು ಟ್ರೈನು ಸಾಗಿ ಹೋಯಿತು ಅನ್ನುವಾಗ ಮತ್ತೊಂದು ಮಗದೊಂದು ರೈಲು ಅದೇ ರೀತಿ ಶಿಳ್ಳೆ ಹೊಡೆಯುತ್ತಾ ಸಾಗಿದರೆ ರಾತ್ರಿ ಇಡೀ ಜಾಗರಣೆ ಆಗಿಬಿಡುತ್ತದೆ. ಈ ಬಗ್ಗೆ ರೈಲ್ವೆ ಇಲಾಖೆಗೆ ದೂರಿದರೂ ಆ ದೂರು ರೈಲು